-ಡಿ-

ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:-DCE/BUD/GCC/4/2023

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ.
ಬೆಂಗಳೂರು. ದಿನಾಂಕ:05.07.2023

ಇವರಿಗೆ.

ಕಾಲೇಜು ಶಿಕ್ಷಣ ಇಲಾಖೆಯ.ವ್ಯಾಪ್ತಿಯಲ್ಲಿ ಬರುವ ಎಲ್ಲಾ ಡಿಡಿಓಗಳಿಗೆ

ಮಾನ್ಯರೆ.

ವಿಷಯ: ಸರ್ಕಾರದ ಸುತ್ತೋಲೆಯನ್ನು ಪರಿಪಾಲಿಸುವ ಬಗ್ಗೆ.

ಉಲ್ಲೇಖ: ಸರ್ಕಾರದ ಸುತ್ತೋಲೆ ಸಂಖ್ಯೆ:-ಆಇ:4(ಇ)ಸೇನಿಸೇ:2023
ದಿನಾಂಕ:27-06-2023

****

ಸರ್ಕಾರದಿಂದ ಹೊರಡಿಸಲಾಗಿರುವ ಉಲ್ಲೇಖಿತ ಸುತ್ತೋಲೆಯಲ್ಲಿ ಸರ್ಕಾರಿ ನೌಕರರಿಗೆ ಹೆಚ್ಚುವರಿಯಾಗಿ ಪಾವತಿಸಲಾದ ವೇತನ ಮತ್ತು ಭತ್ಯೆಗಳನ್ನು ಮರುಪಾವತಿಸಿಕೊಳ್ಳಲು ಇಲಾಖಾ ವ್ಯಾಪ್ತಿಯ ಎಲ್ಲಾ ಡಿಡಿಓಗಳು, ಸರ್ಕಾರಿ ನೌಕರರಿಗೆ ಆರ್ಥಿಕ ಸೌಲಭ್ಯ ಮಂಜೂರು / ಅನುದಾನ ಸೆಳೆಯುವ ಮುನ್ನ ಸರ್ಕಾರ ನೀಡಿರುವ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ನಿರ್ದೇಶನ ನೀಡಲಾಗಿದೆ.

ತಮ್ಮ ವಿಶ್ವಾಸಿ.

ನಿರ್ದೇಶಕರು,
ಕಾಲೇಜು ಶಿಕ್ಷಣ ಇಲಾಖೆ.

ಅಡಕ:

ಉಲ್ಲೇಖಿತ ಸರ್ಕಾರದ ಸುತ್ತೋಲೆಯ ಪ್ರತಿ

ಪ್ರತಿಯನ್ನು:

1) ಕಾಲೇಜು ಶಿಕ್ಷಣ ಇಲಾಖೆ ಕೇಂದ್ರ ಕಛೇರಿಯ ಎಲ್ಲಾ ವಿಭಾಗಗಳಿಗೆ-ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ
2) ಮಾಹಿತಿ ಅಧಿಕಾರಿಗಳು, ಮಾಹಿತಿ & ತಂತ್ರಜ್ಞಾನ ವಿಭಾಗ, ಕಾ.ಶಿ.ಇ ಕೇಂದ್ರ ಕಛೇರಿ, ಬೆಂಗಳೂರು- ಇಲಾಖಾ ವೆಬ್ ಸೈಟ್ ನಲ್ಲಿ ಪ್ರಕಟಿಸಲು.

6136505

07-07-23

ಕರ್ನಾಟಕ ಸರ್ಕಾರ

ಸಂಖ್ಯೆ: ಆಇ 4(ಇ) ಸೇನಿಸೇ 2023

ಕರ್ನಾಟಕ ಸರ್ಕಾರದ ಸಚಿವಾಲಯ,
2ನೇ ಮಹಡಿ, ವಿಧಾನಸೌಧ,
ಬೆಂಗಳೂರು, ದಿನಾಂಕ: 27/06/2023

## ಸುತ್ತೋಲೆ

ವಿಷಯ: ಸರ್ಕಾರಿ ನೌಕರರಿಗೆ ತಪ್ಪಾಗಿ ಹೆಚ್ಚುವರಿಯಾಗಿ ಪಾವತಿಸಲಾದ ವೇತನ ಮತ್ತು ಭತ್ಯೆಗಳನ್ನು ಮರುಪಾವತಿಸಿಕೊಳ್ಳುವ ಬಗ್ಗೆ.

********

ಸರ್ಕಾರಿ ನೌಕರರ ನೇಮಕಾತಿ, ವರ್ಗಾವಣೆ, ವೃಂದ ಬದಲಾವಣೆ, ನಿಯೋಜನೆ, ಮುಂಬಡ್ತಿ, ವೇತನ ಶ್ರೇಣಿ ಬದಲಾವಣೆ ಮತ್ತು ವಾರ್ಷಿಕ ವೇತನ ಬಡ್ತಿ/ಕಾಲಬದ್ಧ ವೇತನ ಬಡ್ತಿ/ ಸ್ವಯಂಚಾಲಿತ ವೇತನ ಬಡ್ತಿ ಮಂಜೂರಾತಿ ಇತ್ಯಾದಿ ಸಂದರ್ಭಗಳಲ್ಲಿ ವೇತನ ನಿಗದೀಕರಣ ಅಥವಾ ಮರುನಿಗದೀಕರಣ ಸನ್ನಿವೇಶಗಳು ಉಂಟಾಗುತ್ತವೆ. ವೇತನ ನಿಗದೀಕರಣ/ಪುನರ್‌ನಿಗದೀಕರಣವನ್ನು ಪರಿಶೀಲಿಸುವ ಅಧಿಕಾರಿ/ನೌಕರರಿಂದ ಕಣ್ತಪ್ಪಿನಿಂದ ನೌಕರರ ಅರ್ಹತೆಗಿಂತ ಹೆಚ್ಚುವರಿ ಆರ್ಥಿಕ ಸೌಲಭ್ಯವನ್ನು ಮಂಜೂರು ಮಾಡಲಾಗಿ, ಸಾಕಷ್ಟು ಸಮಯ ಕಳೆದ ನಂತರ ಅಥವಾ ಸಂಬಂಧಿತ ನೌಕರರು ನಿವೃತ್ತಿ ಅಂಚಿನಲ್ಲಿದ್ದಾಗ ಅಥವಾ ನಿವೃತ್ತರಾದ ನಂತರ ಹೆಚ್ಚುವರಿಯಾಗಿ ಪಾವತಿಸಿದ ಮೊಬಲಗಿನ ವಸೂಲಾತಿಯನ್ನು ಪರಿಗಣಿಸುವ ಸನ್ನಿವೇಶಗಳು ಎದುರಾಗುತ್ತವೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯವು ಪಂಜಾಬ್ ಸರ್ಕಾರ ವಿರುದ್ಧ ರಫೀಕ್ ಮಸೀಹ್ ಇವರ ಪ್ರಕರಣದಲ್ಲಿ (CA No.11527 of 2014) ದಿನಾಂಕ 18.12.2014 ರಂದು ನೀಡಿದ ತೀರ್ಪಿನಲ್ಲಿ ಈ ಕೆಳಕಂಡ ಸಂದರ್ಭಗಳಲ್ಲಿ ಉದ್ಯೋಗದಾತರು ತನ್ನ ಉದ್ಯೋಗಿಗಳಿಗೆ ಅವರ ಅರ್ಹತೆಗಿಂತ ಹೆಚ್ಚಾಗಿ ತಪ್ಪಾಗಿ ಪಾವತಿಸಿದ ಮೊತ್ತವನ್ನು ಹಿಂಪಾವತಿಸಿಕೊಳ್ಳುವುದು ಕಾನೂನುಬಾಹಿರವೆಂದು ತಿಳಿಸಿದೆ:

i. Recovery from employees belonging to Class-III and Class-IV service (or Group 'C' and Group 'D' service).

ii. Recovery from retired employees or employees who are due to retire within one year, of the order of recovery.

iii. Recovery from employees, when the excess payment has been made for a period in excess of five years, before the order of recovery is issued.

iv. Recovery in cases where an employee has wrongfully been required to discharge duties of a higher post, and has been paid accordingly, even though he should have rightfully been required to work against an inferior post.

v. In any other case, where the Court arrives at the conclusion, that recovery if made from the employee, would be iniquitous or harsh or arbitrary to such an extent, as would far outweigh the equitable balance of the employer's right to recover.

ಮುಂದುವರೆದು, ಮಾನ್ಯ ಸರ್ವೋಚ್ಚ ನ್ಯಾಯಾಲಯವು ಪಂಜಾಬ್ ಮತ್ತು ಹರಿಯಾಣ ಉಚ್ಚ ನ್ಯಾಯಾಲಯ ಮತ್ತಿತರರು ವಿರುದ್ಧ ಜಗದೇವ್ ಸಿಂಗ್ ಪ್ರಕರಣದಲ್ಲಿ ನೀಡಿದ ತೀರ್ಪಿನಲ್ಲಿ ಸರ್ಕಾರಿ ನೌಕರರು ಅವರಿಗೆ ವೇತನ ನಿಗಧೀಕರಣದಲ್ಲಿ ಅವರ ಅರ್ಹತೆಗಿಂತ ಹೆಚ್ಚಿಗೆ ಮೊತ್ತವೇನಾದರೂ ಪಾವತಿಯಾದಲ್ಲಿ, ಅದನ್ನು ಮರುಪಾವತಿಸಲು ತಾವು ಬದ್ಧರಾಗಿರುವುದಾಗಿ ಮುಚ್ಚಳಿಕೆಯನ್ನು ಸಲ್ಲಿಸಿರುವ ಸಂದರ್ಭದಲ್ಲಿ ಅಥವಾ ವೇತನ ನಿಗಧೀಕರಣದಲ್ಲಿ ಹೆಚ್ಚುವರಿ ಪಾವತಿಯಾದ ಮೊತ್ತವೇನಾದರೂ ಇದ್ದಲ್ಲಿ ಅದನ್ನು ಅವರಿಂದ ಮರುಪಾವತಿ ಮಾಡಿಕೊಳ್ಳಲಾಗುವುದೆಂದು ಅವರಿಗೆ ತಿಳುವಳಿಕೆ ನೀಡಿದ್ದ ಸಂದರ್ಭದಲ್ಲಿ ಹೆಚ್ಚುವರಿ ಮೊತ್ತವನ್ನು ಅವರಿಂದ (ನಿವೃತ್ತಿ ಹೊಂದಿರುವರನ್ನೊಳಗೊಂಡಂತೆ) ವಸೂಲು ಅಥವಾ ಮರುಪಾವತಿ ಮಾಡಿಕೊಳ್ಳುವಲ್ಲಿ ರಫೀಕ್ ಮಸೀಹ್ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ವಿಧಿಸಿದ ನಿರ್ಬಂಧಗಳು ಅನ್ವಯವಾಗುವುದಿಲ್ಲವೆಂದು ತಿಳಿಸಿದೆ.

ರಫೀಕ್ ಮಸೀಹ್ ಪ್ರಕರಣದಲ್ಲಿನ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಅನ್ವಯಿಸಿ ಅಥವಾ ಈ ತೀರ್ಪನ್ನು ಉಲ್ಲೇಖಿಸಿ, ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿ ಹಾಗೂ ಮಾನ್ಯ ಉಚ್ಚ ನ್ಯಾಯಾಲಯದಿಂದ ಅಂತಹ ಮೊತ್ತವನ್ನು ಮನ್ನಾ ಮಾಡಲು ಆದೇಶವಾದ ಸಂದರ್ಭದಲ್ಲಿ ಸರ್ಕಾರಿ ನೌಕರರಿಗೆ ಹೆಚ್ಚಿಗೆ ಪಾವತಿ ಮಾಡಲಾದ ವೇತನ/ಭತ್ಯೆಗಳ ಮೊತ್ತವನ್ನು ಸರ್ಕಾರದ ಇಲಾಖಾ ಹಂತದಲ್ಲಿಯೇ ಮನ್ನಾ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಮುಂದುವರೆದು, ಸದರಿ ತೀರ್ಪನ್ನು ಉಲ್ಲೇಖಿಸಿ ಹೆಚ್ಚುವರಿಯಾಗಿ ಪಾವತಿಸಿದ ಮೊತ್ತವನ್ನು ಮನ್ನಾ ಮಾಡಬಹುದೇ ಎಂಬ ಬಗ್ಗೆ ಸ್ಪಷ್ಟೀಕರಣ ಕೋರಿ ವಿವಿಧ ಇಲಾಖೆಗಳಿಂದ ಆರ್ಥಿಕ ಇಲಾಖೆಯಲ್ಲಿ ಪ್ರಸ್ತಾವನೆಗಳು ಸ್ವೀಕೃತವಾಗಿರುತ್ತವೆ. ಈ ಪ್ರಸ್ತಾವನೆಗಳನ್ನು ಪರಿಶೀಲಿಸಿದೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯವು ಬ್ರಿಜ್‌ಮೋಹನ್ ಲಾಲ್ ವಿರುದ್ಧ ಭಾರತ ಸರ್ಕಾರ, ಈ ಪ್ರಕರಣದಲ್ಲಿ ನೀಡಿದ ತೀರ್ಪಿನಲ್ಲಿ ತಾವು ಕಾನೂನೆಂದು ಘೋಷಿಸಿರುವ ಸಿದ್ಧಾಂತಗಳು ಎಲ್ಲಾ ಅಧೀನ ನ್ಯಾಯಾಲಯಗಳು ಹಾಗೂ ಅಂತಹ ಕಾನೂನಿಗೆ ಪೂರಕವಾಗಿ ಕಾರ್ಯನಿರ್ವಹಿಸುವ ಎಲ್ಲಾ ಪ್ರಾಧಿಕಾರಗಳಿಗೆ ಬಂಧನಕಾರಿಯಾಗಿರುತ್ತದೆಂದು ತಿಳಿಸಿದೆ.

ಈ ಹಿನ್ನೆಲೆಯಲ್ಲಿ, ರಫೀಕ್ ಮಸೀಹ್ ಪ್ರಕರಣದಲ್ಲಿನ ಮಾನ್ಯ ಸರ್ವೋಚ್ಚ ನ್ಯಾಯಾಲಯದ ದಿನಾಂಕ 18.12.2014 ರ ತೀರ್ಪು ರಾಜ್ಯ ಸರ್ಕಾರದ ಮೇಲೆ ಬಂಧನಕಾರಿಯಾಗಿರುವುದರಿಂದ ಸರ್ಕಾರದ ಎಲ್ಲಾ ಇಲಾಖೆಗಳು ಹಾಗೂ ಅಂಗಸಂಸ್ಥೆಗಳು ತನ್ನ ಅಧೀನ ಸರ್ಕಾರಿ ನೌಕರರು/ ಸಿಬ್ಬಂದಿಗಳಿಗೆ ತಪ್ಪಾಗಿ ಹೆಚ್ಚಿಗೆ ಪಾವತಿಸಿದ ಮೊತ್ತವನ್ನು ಮರುಪಾವತಿಸಿಕೊಳ್ಳುವಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿನನ್ವಯ ಪರಿಶೀಲಿಸಿ ಸೂಕ್ತ ನಿರ್ಧಾರ ತಳೆಯಬೇಕಾಗಿರುತ್ತದೆ. ಆದಾಗ್ಯೂ, ಈ ಕುರಿತು ಈ ಕೆಳಕಂಡ ನಿರ್ದೇಶನಗಳನ್ನು ನೀಡಲಾಗಿದೆ:

1. ಎಲ್ಲಾ ಇಲಾಖೆಗಳು ತಮ್ಮ ಅಧೀನ ಸಿಬ್ಬಂದಿಗಳಿಗೆ ವೇತನ ನಿಗಧೀಕರಣ ಅಥವಾ ಭತ್ಯೆ ಮಂಜೂರಾತಿ ಮಾಡುವಾಗ ಕಡ್ಡಾಯವಾಗಿ ಮೂರು ಹಂತದಲ್ಲಿ ಮೇಲ್ವಿಚಾರಣೆ ಮಾಡತಕ್ಕದ್ದು. ಸಂಬಂಧಪಟ್ಟ ಆಡಳಿತ ಹಾಗೂ ಲೆಕ್ಕಪತ್ರ ಶಾಖೆಗಳು ವೇತನ ನಿಗಧೀಕರಣ ಮತ್ತು ಭತ್ಯೆ ಮಂಜೂರಾತಿಯನ್ನು ಪರಿಶೀಲಿಸಿ ದೃಢೀಕರಿಸತಕ್ಕದ್ದು.
2. ಈ ಸಂದರ್ಭದಲ್ಲಿ ಒಂದು ವೇಳೆ ವೇತನ ಹೆಚ್ಚಿಗೆ ನಿಗಧಿಯಾದ ಪಕ್ಷದಲ್ಲಿ ಅಂತಹ ಮೊತ್ತವನ್ನು ತಮ್ಮ ವೇತನದಿಂದ ಅಥವಾ ಪಿಂಚಣಿಯಿಂದ ಅಥವಾ ತಮ್ಮ ಕಾನೂನಿನ ವಾರಸುದಾರರಿಂದ ವಸೂಲು ಮಾಡಿಕೊಳ್ಳಲು ತಮ್ಮ ಅಭ್ಯಂತರವಿಲ್ಲವೆಂದು ನೌಕರರಿಂದ ಮುಚ್ಚಳಿಕೆ ಪತ್ರವನ್ನು ಕಡ್ಡಾಯವಾಗಿ ಪಡೆಯತಕ್ಕದ್ದು.

3. ಮುಚ್ಚಳಿಕೆ ಪಡೆಯುಕೊಳ್ಳದೇ ಅಥವಾ ತಪ್ಪು ವೇತನ ನಿಗಧೀಕರಣವನ್ನು ಮುಂದುವರೆಸುವುದರಿಂದ ಸರ್ಕಾರಕ್ಕೆ ನಷ್ಟವುಂಟು ಮಾಡಿದಲ್ಲಿ ಈ ರೀತಿ ಹೆಚ್ಚಿಗೆ ಪಾವತಿಸಿದ ಮೊತ್ತವನ್ನು ತಪ್ಪು ನಿಗಧಿಪಡಿಸಿದ ಅಧಿಕಾರಿ/ ನೌಕರರುಗಳಿಂದ ಸಮಾನವಾಗಿ ವಸೂಲು ಮಾಡತಕ್ಕದ್ದು.

4. ನೌಕರರು ತಪ್ಪು ಕ್ಲೈಮ್‌ನ್ನು ಸಲ್ಲಿಸಿದ ಮೇರೆಗೆ (misrepresentation) ಅಥವಾ ನೌಕರರಿಂದ ಮುಚ್ಚಳಿಕೆಯನ್ನು ಬರೆಯಿಸಿಕೊಂಡು ಮಂಜೂರು ಮಾಡಲಾದ ವೇತನ ನಿಗಧೀಕರಣ ಅಥವಾ ಭತ್ಯೆ ಮಂಜೂರಾತಿಯಲ್ಲಿ ತಪ್ಪಾಗಿ ಹೆಚ್ಚಿಗೆ ಪಾವತಿಸಿದ ಮೊತ್ತವನ್ನು ಸರ್ಕಾರಕ್ಕೆ ಹಿಂಪಾವತಿಸಿಕೊಳ್ಳುವ ಹಕ್ಕನ್ನು ಸರ್ಕಾರ ಕಾದಿರಿಸಿಕೊಂಡಿದೆ.

5. ಈ ಹಿಂದೆ 'ಸಿ' ಅಥವಾ 'ಡಿ' ವೃಂದದ ಹುದ್ದೆಯಲ್ಲಿದ್ದಾಗ ತಪ್ಪಾಗಿ ಹೆಚ್ಚಿಗೆ ಪಾವತಿಸಿದ ಮೊತ್ತವನ್ನು ಸದರಿ ನೌಕರರು 'ಎ' ಅಥವಾ 'ಬಿ' ವೃಂದಕ್ಕೆ ಮುಂಬಡ್ತಿ ಹೊಂದಿದ ನೌಕರರಿಂದ ವಸೂಲು ಮಾಡುವಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪು ಬಾಧಕವಾಗುವುದಿಲ್ಲ.

6. ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಅನುಸಾರ ನಿವೃತ್ತ ನೌಕರರಿಂದ ಅಥವಾ ಒಂದು ವರ್ಷದೊಳಗೆ ನಿವೃತ್ತಿ ಹೊಂದಲಿರುವ ನೌಕರರಿಂದ ಹೆಚ್ಚಿಗೆ ಪಾವತಿಸಿದ ಮೊತ್ತವನ್ನು ವಸೂಲಾತಿ ಮಾಡುವಂತಿಲ್ಲ. ಆದುದರಿಂದ, ಎಲ್ಲಾ ಇಲಾಖೆಗಳು ನೌಕರರ ನಿವೃತ್ತಿಯ ಒಂದು ವರ್ಷ ಪೂರ್ವದಲ್ಲಿ ಅವರ ವೇತನ ನಿಗಧೀಕರಣವನ್ನು ಪರಾಮರ್ಶಿಸತಕ್ಕದ್ದು. ಸ್ವ-ಇಚ್ಛಾ ನಿವೃತ್ತಿ ಕೋರಿಕೆಗಳನ್ನು ಪರಿಗಣಿಸುವಾಗ ಸಂಬಂಧಿತ ಅಧಿಕಾರಿ/ನೌಕರರಿಂದ ಯಾವುದೇ ಹೆಚ್ಚುವರಿ ಪಾವತಿಸಿದ ಮೊತ್ತ ವಸೂಲು ಮಾಡಬೇಕಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

7. ಐದು ವರ್ಷಗಳಿಗಿಂತ ಹಿಂದಿನ ಅವಧಿಯಲ್ಲಿ ಪಾವತಿಸಲಾದ ಹೆಚ್ಚಿಗೆ ಮೊತ್ತವನ್ನು ವಸೂಲು ಮಾಡುವಂತಿಲ್ಲವೆಂದು ಮಾನ್ಯ ಸರ್ವೋಚ್ಚ ನ್ಯಾಯಾಲಯವು ತಿಳಿಸಿರುವುದರಿಂದ ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ಸರ್ಕಾರಿ ನೌಕರರ ವೇತನ ನಿಗಧೀಕರಣವನ್ನು ಸಂಬಂಧಿತ ಸಕ್ಷಮ ಪ್ರಾಧಿಕಾರಗಳು ಪರಾಮರ್ಶಿಸತಕ್ಕದ್ದು.

8. ಹೆಚ್ಚುವರಿಯಾಗಿ ಪಾವತಿಸಿದ ಮೊತ್ತವನ್ನು ಮನ್ನಾ ಮಾಡುವ ಪ್ರಕರಣಗಳನ್ನು ಆರ್ಥಿಕ ಇಲಾಖೆಯ ನಿರ್ದಿಷ್ಟ ಸಹಮತಿಯ ಮೇರೆಗೆ ಪರಿಗಣಿಸತಕ್ಕದ್ದು.

ಇಲಾಖಾ ಮುಖ್ಯಸ್ಥರು ತಮ್ಮ ಅಧೀನ ಕಚೇರಿ/ಸಿಬ್ಬಂದಿಗಳಿಗೆ ಮೇಲ್ಕಿನ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಸೂಕ್ತ ನಿರ್ದೇಶನ ನೀಡುವುದು.

(ಅಜಯ್ ಎಸ್. ಕೊರಡೆ)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸೇವೆಗಳು-1)

ಪ್ರತಿ ಇವರಿಗೆ:

1. ಪ್ರಧಾನ ಮಹಾಲೇಖಪಾಲರು (G & SSA), ಕರ್ನಾಟಕ ಹೊಸ ಕಟ್ಟಡ, "ಆಡಿಟ್ ಭವನ", ಪೋಸ್ಟ್ ಬಾಕ್ಸ್ ಸಂಖ್ಯೆ:5398, ಬೆಂಗಳೂರು-560001.
2. ಮಹಾಲೇಖಪಾಲರು (E & RSA), ಕರ್ನಾಟಕ ಹೊಸ ಕಟ್ಟಡ, "ಆಡಿಟ್ ಭವನ", ಪೋಸ್ಟ್ ಬಾಕ್ಸ್ ಸಂಖ್ಯೆ:5398, ಬೆಂಗಳೂರು-560001.

3. ಮಹಾಲೇಖಪಾಲರು (A & E), ಕರ್ನಾಟಕ ಪೋಸ್ಟ್ ಬಾಕ್ಸ್ ಸಂಖ್ಯೆ:5329/5369, ಪಾರ್ಕ್ ಹೌಸ್ ರೋಡ್‌ಬೆಂಗಳೂರು.
4. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು, ವಿಧಾನ ಸೌಧ, ಬೆಂಗಳೂರು.
6. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.
7. ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
8. ಪ್ರಾದೇಶಿಕ ಆಯುಕ್ತರು, ಬೆಂಗಳೂರು / ಮೈಸೂರು / ಬೆಳಗಾವಿ / ಗುಲ್ಬರ್ಗಾ.
9. ಎಲ್ಲಾ ಜಿಲ್ಲಾಧಿಕಾರಿಗಳು.
10. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
11. ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.
12. ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
13. ರಿಜಿಸ್ಟ್ರಾರ್, ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ, ಕಂದಾಯ ಭವನ, ಬೆಂಗಳೂರು.
14. ಕಾರ್ಯದರ್ಶಿ, ಕರ್ನಾಟಕ ಲೋಕ ಸೇವಾ ಆಯೋಗ, ಬೆಂಗಳೂರು.
15. ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ/ವಿಧಾನ ಪರಿಷತ್ತು, ಬೆಂಗಳೂರು.
16. ಖಜಾನೆ ಅಧಿಕಾರಿ, ರಾಜ್ಯ ಹುಜೂರು ಖಜಾನೆ/ಜಿಲ್ಲಾ ಖಜಾನೆಗಳು.
17. ಯೋಜನಾ ನಿರ್ದೇಶಕರು, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ವಿಕಾಸ ಸೌಧ, ಬೆಂಗಳೂರು.
18. ಪ್ರಾಜೆಕ್ಟ್ ಆಫೀಸರ್, ಹೆಚ್. ಆರ್. ಎಂ.ಎಸ್. ಕೊಠಡಿ ಸಂಖ್ಯೆ:145 "A" ಬಹುಮಹಡಿಗಳ ಕಟ್ಟಡ, ಬೆಂಗಳೂರು.
19. ಕಾರ್ಯದರ್ಶಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ವಿಧಾನ ಸೌಧ, ಬೆಂಗಳೂರು.
20. ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಕಬ್ಬನ್ ಉದ್ಯಾನವನ, ಬೆಂಗಳೂರು.
21. ಕರ್ನಾಟಕ ಸರ್ಕಾರಿ ಸಚಿವಾಲಯದ ಎಲ್ಲಾ ಶಾಖೆಗಳು.
22. ಕರ್ನಾಟಕ ಸರ್ಕಾರಿ ಸಚಿವಾಲಯದ ಗ್ರಂಥಾಲಯ/ವಿಧಾನ ಮಂಡಲದ ಗ್ರಂಥಾಲಯ.
23. ವಾರಪತ್ರ/ಶಾಖೆಯ ರಕ್ಷಾ ಕಡತ/Web portal.

ಕರ್ನಾಟಕ ಸರ್ಕಾರದ ಅಧಿಕೃತ ಅಂತರ್ಜಾಲ ತಾಣ www.finance.karnataka.gov.in ವೀಕ್ಷಿಸಿ.